ಕಾರ್ಖಾನೆಯನ್ನು ಮುಚ್ಚಿದ್ದೀರಿ ? ಅಲ್ಲಿ ಸರಿಯಾದ ನೀರಾವರಿ ಸೌಕರ್ಯವಿದಿದ್ದರೆ ತವಂಗೆ ೭೦ ಲಕ್ಷ ಟನ್‌ಗಳಷ್ಟು ಕಬ್ಬನ್ನು ಬೆಳೆದು ಜನ ಕೊಡುತ್ತಿದ್ದರು. ಆದರೂ ಸಹ ಆ ಕಾರ್ಖಾನೆಯನ್ನು ತಾವು ನಡೆಸಿ ಲಾಭದಾಯಕವಾಗಿ ನಡೆಸುವಂತೆ ಅಲ್ಲಿನ ಶಾಸಕರು ತಮಗೆ ಸಲಹೆ ಕೊಡುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಕೊಳ್ಳೆಗಾಲ ಶುಗರ್ ಫ್ಯಾಕ್ಟರಿಯಲ್ಲಿ ಒಂದು ವರ್ಷಕ್ಕೆ ಸುಮಾರು ೧೦ ಕೋಟಿ ೫೬ ಲಕ್ಷ ರೂಪಾಯಿಗಳ ನಷ್ಟವಾಗುತ್ತದೆ. ಕಳೆದ ಮೂರು ವರ್ಷಗಳಿಂದ ಅಲ್ಲಿ ಕಬ್ಬು ಇಲ್ಲ. ಸುಮಾರು ೧೮೮ ಲಕ್ಷ ರೂಪಾಯಿಗಳನ್ನು ಬೆಳಿಗಾರರ ಸಾಲವನ್ನು ತೀರಿಸುವುದಕ್ಕೆ ಮತ್ತು ಅಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಬಳಕ್ಕೆ ಕೊಡುತ್ತಿದ್ದೇವೆ. ಇನ್ನು ಸುಮಾರು ೪೦ ಲಕ್ಷ ರೂಪಾಯಿಗಳ ಬಾಕಿ ಇದೆ. ಆ ಕಾರ್ಖಾನೆಯನ್ನು ನಡೆಸುವಂತಹ ಸ್ಥಿತಿಯಲ್ಲಿ ಸರ್ಕಾರ ಇಲ್ಲ. ಬೇಕೆಯವರಿಗೆ ಕೊಡಬೇಕೆಂದು ಸರ್ಕಾರ ಅಡ್ವರ್‌ಟೈಜ್‌ಮೆಂಟ್ ಮಾಡಿದೆ,

ಶ್ರೀ ಜಿ. ರಾಜುಗೌಡ.—ಸ್ವಾಮಿ ಸ್ಥಳೀಯ ಶಾಸಕರನ್ನು ಕರೆಸಿ, ಅವರು ತಮಗೆ ಸಲಹೆ ಕೊಡುತ್ತಾರೆ ?

ಶ್ರೀ ಆರ್. ಎಲ್. ಜಾಲಪ್ಪ.—ಅವಶ್ಯಕತೆ ಬಿದ್ದರೆ ಸ್ಥಳೀಯ ಶಾಸಕರನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಜಿ. ರಾಜುಗೌಡ.—ಸ್ವಾಮಿ ಲಾಭದಲ್ಲಿ ನಡೆಯುವಂತೆ ಸಲಹೆಗಳನ್ನು ಶಾಸಕರು ಕೊಡುವಾಗ ತಾವು ಏತಕ್ಕೆ ಕರೆಸಬಾರದು ?

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ ಅವರು ತಮ್ಮ ಸಲಹೆಗಳು ಏನಾದರೂ ಇದ್ದರೆ ಬರವಣಿಗೆಯ ಮೂಲಕ ಬರೆದು ಕಳುಹಿಸಿಕೊಡಲಿ ನಾನು ಅದನ್ನು ಕನ್ಸಿಡರ್ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಸ್ವಾಮಿ, ಮಾನ್ಯ ಸಹಕಾರ ಸಚಿವರು ಕಬ್ಬು ಸಿಗುವುದಿಲ್ಲವೆನ್ನುವ ಮಾತನ್ನು ಹೇಳಿದರು...

ಅಧ್ಯಕ್ಷರು.—ನಾನು ತಮಗೆ ಆಗಲೇ ಒಂದು ಅವಕಾಶವನ್ನು ಕೊಟ್ಟಿದ್ದೇನೆ. ಎಷ್ಟು ಸಾರಿ ಎದ್ದು ನಿಂತು ಮಾತನಾಡುತ್ತೀರಿ. ಈ ರೀತಿ ಮಾಡಿದರೆ ತಮಗೆ ನಾನು ಇನ್ನೊಂದು ಸಾರಿ ಅವಕಾಶ ಮಾಡಿ ಕೊಡುವುದಿಲ್ಲ. ದಯವಮಾಡಿ ಕುಳಿತುಕೊಳ್ಳಿ.

ಬಿ.ಜಿ.ಎಂ.ಎಲ್. ಮತ್ತು ಬಿ.ಇ.ಎಂ.ಎಲ್. ಗಳ ಮೇಲೆ ಹಾಕಿರುವ ಟ್ಯಾರಿಫ್ ದರ ಮತ್ತು ಈ ಕಾರ್ಖಾನೆಗಳು ಉಪಯೋಗಿಸಿದ ವಿದ್ಯುತ್

೨೦೬. ಶ್ರೀ ಟಿ.ಎಸ್. ಮಣಿ.—ಮಾನ್ಯ ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಎನ್‌ಜಿ.ಇ.ಎಫ್, ಜಿ.ಇ.ಎಫ್ ಮತ್ತು ಇತರ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳು ಹರಿಹರ ಪಾಲಿಫೈಬರ್, ಜಿಂದಾಲ್ ಮತ್ತು ಮೈಕೋಗಳನ್ನು ಸೇರಿದಂತೆ ವಿಧಿಸಿರುವ ಟ್ಯಾರಿಫ್ ದರವೇನು ?

ಆ) ಬಿ.ಜಿ.ಎಂ.ಎಲ್. ಮತ್ತು ಬಿ.ಇ.ಎಂ.ಎಲ್.ಗಳ ಮೇಲೆ ಹಾಕಿರುವ ಟ್ಯಾರಿಫ್ ದರ ಮತ್ತು ಈ ಕಾರ್ಖಾನೆಗಳು ಉಪಯೋಗಿಸಿದ ವಿದ್ಯುತ್.

ಇ) ಹೆಚ್ಚಿನ ಟ್ಯಾರಿಫ್ ದರದಿಂದಾಗಿ ಬಿ.ಜಿ.ಎಂ.ಎಲ್. ನಷ್ಟ ಹೊಂದುತ್ತಿದ್ದು ಅದನ್ನು ಮುಚ್ಚುವುದಾಗಿ ಕೇಂದ್ರ ಮಂತ್ರಿಗಳ ಹೇಳಿಕೆ ಸರ್ಕಾರಕ್ಕೆ ತಿಳಿದಿದೆಯೆ, ಇದರ ಬಗ್ಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಏನು ?

ಈ) ಶಿವನಸಮುದ್ರವನ್ನು ಬಿ.ಜಿ.ಎಂ.ಎಲ್.ನ ಕ್ಯಾಪ್‌ಟೀವ್ ಪವರ್ ಪ್ಲಾಂಟ್ ಮಾಡಲು ಭಾರತ ಸರ್ಕಾರದ ಬೇಡಿಕೆ ಇದೆಯೇ, ಹಾಗಾದರೆ ಈ ಬಗ್ಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಏನು ?

ಶ್ರೀ ಜೆ.ಎಸ್, ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಟ್ಯಾರಿಫ್ ದರವನ್ನು ಬೇರೆ ಬೇರೆ ಕೈಗಾರಿಕೆಗಳಿಗೆಂದು ಪ್ರತ್ಯೇಕವಾಗಿ ನಿಗದಿ ಮಾಡುವುದಿಲ್ಲ. ಆದರೆಅದನ್ನು ಗಂರುತಿಸಿದ ವರ್ಗಗಳ ಮೇಲೆ ನಿಗದಿ ಮಾಡಲಾಗುತ್ತದೆ.೨೫೦೦೦ ಕೆ.ವಿ.ಎ.ಗಿಂತ ಕಡಿಮೆ ಕಂಟ್ರಾಕ್ಟ್ ಡಿಮ್ಯಾಂಡ್ ಇರಂವ ಈ ಕೈಗಾರಿಕೆಗಳಿಗೆ ಮತ್ತು ಇತರೇ ಇದೇ ತರಹದ ಹೈ ಟೆನ್‌ಷನ್ ಕೈಗಾರಿಕೆಗಳಿಗೆ ಪ್ರತಿತಿಂಗಳೂ ಅವುಗಳು ಉಪಯೋಗಿಸಿದ ಯೂನಿಟ್ಟುಗಳ ಮೇಲೆ ಪ್ರತಿ ಯೂನಿಟ್ಟಿಗೂ ೫೦ ಪೈಸೆಯಂತೆಯೂ ಬಿಲ್ಲಿಂಗೆ ಡಿಮ್ಯಾಂಡ್ ಮೇಲೆ ಪ್ರತಿ ಕೆ.ವಿ.ಎ.ಗೆ ೩೫ ರೂಪಾಯಿಗಳಂತೆಯೂ ವಿದ್ಯುತ್ ಶುಲ್ಕವನ್ನು ವಿದ್ಯುತ್ ವಂಂಡಳಿ ನಿಗದಿ ವಾಡಿದೆ.

ವಿದ್ಯುತ್ ಕಡಿತಕ್ಕೆ ಒಳಪಡುವ ಎನ್‌ಸ್ಟಾಲೇಷನ್‌ಗಳು ಅವುಗಳಿಗೆ ನಿಗದಿ ಮಾಡಿದ ಯೂನಿಟ್ಟುಗಳ (ಮಾಹೆಯಾನ) ಶೇ ೨೫ರಷ್ಟು ಪ್ರತಿ ಯೂನಿಟ್ಟಿಗೆ ೮೦ ಪೈಸೆಯಂತೆಯೂ ಮತ್ತು ಉಳಿದ ಯೂನಿಟ್ಟುಗಳಿಗೆ ಯೂನಿಟ್ಟಿಗೆ ೫೦ ಪೈಸೆಯಂತೆ ವಿದ್ಯುತ್ ಶುಲ್ಕ ಕೊಡಬೇಕಾಗುತ್ತದೆ.

ಆ) ಬಿ.ಜಿ.ಎಂ.ಎಲ್ ಮತ್ತು ಬಿ.ಇ.ಎಂ.ಎಲ್ ಗಳಿಗೆ ಮೇಲೆ ತಿಳಿಸಿರುವ ಟ್ಯಾರಿಫ್ ದರವು ಅನ್ವಯವಾಗುತ್ತದೆ. ೧-೪-೧೯೮೫ರಿಂದ ೩೧-೧೨-೧೯೮೫ರ ವರೆಗೆ ಈ ಕೈಗಾರಿಕೆಗಳು ಉಪಯೋಗಿಸಿದ ವಿದ್ಯುತ್‌ನ ವಿವರಗಳು ಈ ಕೆಳಕಂಡಂತೆ ಇದೆ.

೧) ಬಿ.ಜಿ.ಎಂ.ಎಲ್.—೬೨೦,೮೫೫,೮೬೭ ಯೂನಿಟ್ಟುಗಳು

೨) ಬಿ.ಇ.ಎಂ.ಎಲ್.—
- ೧) ಕೆ.ಜಿ.ಎಫ್.—೪೮,೨೦,೮೫೮ ಯೂನಿಟ್ಟುಗಳು
- ೨) ಬೆಂಗಳೂರು.—೨೫,೦೦,೮೦೦ ಯೂನಿಟ್ಟುಗಳು
- ೩) ವೈಸೂರು.—೩,೩೩,೨೬೪ ಯೂನಿಟ್ಟುಗಳು

೩) ಸರ್ಕಾರಕ್ಕೆ ಈ ಅಭಿಪ್ರಾಯ ಗೊತ್ತಿದೆ,

ಈ) ಭಾರತ ಸರ್ಕಾರದಿಂದ ಈ ಬಗ್ಗೆ ಬೇಡಿಕೆ ಬಂದಿಲ್ಲ. ಆದರೆ ಬಿ.ಜಿ.ಎಂ.ಎಲ್ ರವರ ಮೂಲಕ ಬೇಡಿಕೆ ಬಂದಿದೆ, ಇದನ್ನು ಒಪ್ಪಲು ಸಾಧ್ಯವಾಗಲಾರದು.

ಶ್ರೀ ಟಿ.ಎಸ್. ಮಣಿ.—ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಇಂಗ್ಲಿಷ್‌ನಲ್ಲಿ ಹೇಳಬೇಕು, ಇಲ್ಲದಿದ್ದರೆ ನಮಗೆ ಅಂಡರ್‌ಸ್ಟ್ಯಾಂಡ್ ಆಗುವುದಿಲ್ಲ. ಉತ್ತರ ಕನ್ನಡದಲ್ಲಿ ಮಾತ್ರ ಕೊಟ್ಟಿದ್ದಾರೆ, ಕನ್ನಡ ಇಂಗ್ಲಿಷ್ ಎರಡರಲ್ಲೂ ಕೊಡಬೇಕು, ಇಲ್ಲದಿದ್ದರೆ ನಮಗೆ ಅರ್ಥ ಆಗುವುದಿಲ್ಲ.

ಅಧ್ಯಕ್ಷರು.—ಆಯಿತು, ಇಂಗ್ಲೀಷ್‌ನಲ್ಲಿ ಕೊಡಿಸುತ್ತೇನೆ.

SRI T.S. MANI.—At present the B.G,M,L. is facing power crisis, I request the Government to reconsider and give relief.

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಈಗಲೇ ಎರಡೂ ಕಂಪನಿಗಳಿಗೆ ಪವರ್ ಕಟ್ ಮಾಡಿಲ್ಲ, ಮುಂದೆ ಈ ರೀತಿ ಆದರೆ ಇದರ ಬಗ್ಗೆ ವಿಚಾರ ಮಾಡುತ್ತೇನೆ.

ಹುಂಡೇಕಾರ ಆಯೋಗದ ವರದಿ

೧೦. ಶ್ರೀ ಕೆ.ಹೆಚ್ ಪಾಟೀಲ್ (ಗದಗ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪುನರ್ ವಿಂಗಡಣೆಗೆ ಸಂಬಂದಿಸಿದಂತೆ ನೇಮಿಸಲಾದ ಶ್ರೀ ಹುಂಡೇಕರ್ ಸಮಿತಿಯವರು ತಮ್ಮ ವರದಿಯನ್ನು ಒಪ್ಪಿಸಿರುವರೆ ?

ಆ) ಈ ಬಗ್ಗೆ ಕೆಲವು ಪತ್ರಿಕೆಗಳಲ್ಲಿ, ಈಗಾಗಲೇ ಮೊದಲು ನೇಮಕಗೊಂಡ ವಾಸುದೇವ ರಾವ್ ಸಮಿತಿಯ ಶಿಫಾರಸ್ಸುಗಳ ತದ್ವಿರುದ್ಧ ವರದಿಯೊಂದು ಪ್ರಕಟಣೆಯಾಗಿರುವುದು ನಿಜವೇ ?

ಇ) ಈ ರಹಸ್ಯ ವರದಿಯನ್ನು ಪ್ರಕಟಿಸಿರುವವರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು ?